**ದಿವಾಣಿ ಹಾಗೂ ಪ್ರ.ದ.ನ್ಯಾ ದಂ.ಗಳ ನ್ಯಾಯಾಲಯ ಕುಂದಗೋಳ**

**ಸಿ ಸಿ ನಂಃ 51/2016**

**ಸಿಡಬ್ಲ್ಯೂಃ37 ಪಿ ಡಬ್ಲ್ಯೂಃ33**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತುಃ ದಿಃ 04.03.2026**

**ಪಾಟೀ ಸವಾಲುಃ ಶ್ರೀ ಸಿ ಎಮ್ ಕೆ ವಕೀಲರಿಂದ 2, 8 ಮತ್ತು 15 ನೇ ಆರೋಪಿಗಳ ಪರ ವಕೀಲರುಃ**

1. ನಾನು ಇಂಗಳಗಿ ಗ್ರಾಮ ಪಂಚಾಯತನಲ್ಲಿ ಪಿಡಿಓ ಅಂತ ಈ ಹಿಂದೆ ಕರ್ತವ್ಯ ನಿರ್ವಹಿಸಿದ್ದೇನೆ. ನಮ್ಮ ಗ್ರಾಮ ಪಂಚಾಯತ ಪತ್ರ ವ್ಯವಹಾರ ಸಂಬಂದಪಟ್ಟ ಹಾಗೇ ಲೆಟ್ಟರ ಹೆಡ್ಡನ್ನು ಬಳಸುತಿದ್ದೇವು. ನಿಪಿಃ39 ರಲ್ಲಿನ ಯಾವುದೇ ದಾಖಲೆಗಳು ನಮ್ಮ ಇಂಗಳಗಿ ಪಂಚಾಯತನಿಂದ ಪೂರೈಸಿದ್ದು ಇರುವುದಿಲ್ಲ ಎಂದರೆ ಸರಿ. ನಿಪಿಃ39 ರಲ್ಲಿ ಎಲ್ಲಾ ದಾಖಲೆಗಳು ಜರಾಕ್ಸ ಪ್ರತಿಗಳು ಆಗಿರುತ್ತವೆ ಎಂದರೆ ಸರಿ. ಸಾಕ್ಷಿಗೆ ನಿಪಿಃ44 ನ್ನು ತೋರಿಸಿ ಸದರಿ ದಾಖಲೆ ಗ್ರಾಮ ಪಂಚಾಯತ ಲೆಟ್ಟರ ಹೆಡ್ಡ ಮೇಲೆ ಬರೆಯಲಾಗಿರುವುದಿಲ್ಲ ಎಂಬ ಸೂಚನೆಯನ್ನು ಸಾಕ್ಷಿ ಒಪ್ಪಿಕೊಂಡಿರುತ್ತಾರೆ. ನಿಪಿಃ44 ರಂತೆ ಯಾವುದೇ ಪತ್ರ ಬರೆದಿರುವುದಿಲ್ಲ ಹಾಗೂ ಆ ಸಂಬಂಧ ನಾವು ಯಾವುದೇ ದಾಖಲೆಗಳನ್ನು ನಮ್ಮ ಪಂಚಾಯತನಿಂದ ತನಿಖಾಧಿಕಾರಿಗಳಿಗೆ ಪೂರೈಸಿರುವುದಿಲ್ಲ ಎಂದರೆ ಸರಿಯಲ್ಲ.

2. ನಿಪಿಃ40 ರ ಮೇಲೆ ಸರಕಾರಿ ಕಾರ್ಯಾಲಯದ ಮೋಹರ್ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿಃ40 ರ ಪುಟ ಸಂಃ2 ರ ಮೇಲೆ ಕಾರ್ಯದರ್ಶಿಯ ಸಹಿ ಮತ್ತು ಮೋಹರ ಇರುವುದಿಲ್ಲ ಎಂದರೆ ಸರಿ. ನಿಪಿಃ40 ಸಹಾಯಕ ಇಂಜಿನೀಯರ್ ಇವರು ನೀಡಿರುವುದಾಗಿ ಹೇಳಿದ ಪುಟ ನಂಃ3 ಮತ್ತು 4 ರ ಮೇಲೆ ಸಂಬಂದಪಟ್ಟ ಇಲಾಖೆಯ ಮೋಹರ ಇರುವುದಿಲ್ಲ ಎಂದರೆ ಸರಿ. ನಿಪಿಃ40 ಪುಟ ನಂಃ5 ರಿಂದ 11 ಮಾಸ್ಟರ ರೂಲನ್ನು ಯಾರು ತಯಾರಿಸಿದ್ದು ಎಂದರೆ ಸಾಕ್ಷಿ ಗ್ರಾಮ ಪಂಚಾಯತ ಸಿಬ್ಬಂದಿ ಎಂದು ನುಡಿಯುತ್ತಾರೆ. ಸದರಿ ಸಿಬ್ಬಂದಿ ಮೇಟ್ಸ ಅಂತ ಹುದ್ದೆಯ ವ್ಯಕ್ತಿಯಾಗಿರುತ್ತಾರೆ. ಪುಟ ನಂಃ5 ರಿಂದ 11 ರ ಮೇಲೆ ಸಂಬಂದಪಟ್ಟ ಮೇಟ ಹುದ್ದೆಯ ವ್ಯಕ್ತಿಯ ಸಹಿ ಮತ್ತು ಸೀಲ ಇರುವುದಿಲ್ಲ. ಪುಟ ನಂಃ5 ರಿಂದ 11 ಹಾಜರಾತಿ ಪಟ್ಟಿಯನ್ನು ತಯಾರಿಸುವ ಸಮಯದಲ್ಲಿ ಇಂಗಳಗಿ ಗ್ರಾಮ ಪಂಚಾಯತಿಗೆ ಯಾರು ಚುನಾಯಿತ ಅಧ್ಯಕ್ಷರು ಮುತ್ತ ಸದಸ್ಯರು ಇರಲಿಲ್ಲ, ಆ ಸಮಯದಲ್ಲಿ ಆಡಳಿತಾಧಿಕಾರಿಗಳು ಕರ್ತವ್ಯ ನಿರ್ವಹಿಸುತಿದ್ದರು, ಆ ಬಗ್ಗೆ ಪುಟ ನಂಃ5 ರಿಂದ 11 ರ ಮೇಲೆ ಆಡಳಿತಾಧಿಕಾರಿಗಳ ಸಹಿ ಮತ್ತು ಮೋಹರ

ಇದೆ. ಪುಟ ನಂಃ5 ರಿಂದ 11ರ ಮೇಲೆ ಪಿಡಿಓ ಇವರ ಸಹಿ ಮತ್ತು ಮೋಹರ ಇರುವುದಿಲ್ಲ ಎಂದರೆ ಸರಿ.

3. ಸಾಮಾನ್ಯವಾಗಿ ಕಾರ್ಯದರ್ಶಿ ಇವರು ಪಿಡಿಓ ಇವರ ಕೈ ಕೆಳಗೆ ಕೆಲಸ ಮಾಡುವ ವ್ಯಕ್ತಿ ಎಂದರೆ ಸರಿ. ನಿಪಿಃ41ಕ್ಕೆ ಯಾವುದೇ ಪುಟದ ಮೇಲೆ ಪಿಡಿಓ ಸಹಿ ಮತ್ತು ಮೋಹರ ಇರುವುದಿಲ್ಲ ಎಂದರೆ ಸರಿ. ನಿಪಿಃ41 ತಯಾರಿಸುವ ಸಮಯದಲ್ಲಿ ಆಡಳಿತಾಧಿಕಾರಿಗಳು ಇದ್ದರೋ ಅಥವಾ ಚುನಾಯಿತ ಅಧಿಕಾರಿಗಳು ಇದ್ದರೋ ಎಂದು ನೆನೆಪು ಇಲ್ಲ. ನಿಪಿಃ41ರ ಪುಟಗಳ ಮೇಲೆ ಆಡಳಿತಾಧಿಕಾರಿಗಳ, ಚುನಾಯಿತ ಅಧಿಕಾರಿಗಳು ಅಥವಾ ಅಧ್ಯಕ್ಷರ ಸಹಿ ಮತ್ತು ಮೋಹರ ಇರುವುದಿಲ್ಲ ಎಂದರೆ ಸರಿ.

4. ದಿಃ01.10.2010 ರಂದು ನಿಪಿಃ42 ನ್ನು ತಯಾರಿಸುವ ಸಮಯದಲ್ಲಿ ಪಂಚಾಯತ ಆಡಳಿತಾಧಿಕಾರಿಗಳು ಇದ್ದರೋ ಅಥವಾ ಚುನಾಯಿತ ಅಧಿಕಾರಿಗಳು ಇದ್ದರೋ ಎಂದು ನನಗೆ ನೆನೆಪು ಇಲ್ಲ. ಸಾಮಾನ್ಯವಾಗಿ ನಿಪಿಃ42ರಂತಹ ದಾಖಲೆಗೆ ಚುನಾಯಿತ ಅಧ್ಯಕ್ಷರು ಅಥವಾ ಆಡಳಿತಾಧಿಕಾರಿಗಳ ಸಹಿ ಮತ್ತು ಮೋಹರ ಇರತಕ್ಕದ್ದು ಎಂದರೆ ಸರಿ.

5. ನಿಪಿಃ43 ಸಹ ಲೆಟ್ಟರ ಹೆಡ್ಡ ಮೇಲೆ ಇರುವುದಿಲ್ಲ ಎಂದರೆ ಸರಿ. ನಿಪಿಃ43 ಕ್ಕೆ ಸಹ ಪಿಡಿಓ, ಅಧ್ಯಕ್ಷರು ಅಥವಾ ಆಡಳಿತಾಧಿಕಾರಿಗಳ ಸಹಿ ಇರುವುದಿಲ್ಲ ಎಂದರೆ ಸರಿ. ನಿಪಿಃ45ಕ್ಕೆ ಸಂಬಂದಪಟ್ಟ ಇಂಜೀನಿಯ ಅಂತ ಹೇಳಲಾದ ಇಲಾಖೆ ಇವರ ಸಹಿ ಮತ್ತು ಮೋಹರ ಇರುವುದಿಲ್ಲ ಎಂದರೆ ಸರಿ. ನಿಪಿಃ46 ಸಹ ಲೆಟ್ಟರ ಹೆಡ್ಡ ಮೇಲೆ ಇರುವುದಿಲ್ಲ ಎಂದರೆ ಸರಿ. ನಿಪಿಃ46 ಕ್ಕೆ ಸಹ ಪಿಡಿಓ ಅಥವಾ ಅಧ್ಯಕ್ಷರು ಸಹಿ ಇರುವುದಿಲ್ಲ ಎಂದರೆ ಸರಿ.

6. ನಿಪಿಃ47ರ ಮೇಲೆ ದಾಖಲೆ ಕಳುಹಿಸಿಕೊಟ್ಟ ಇಂಜಿನೀಯರ ಎಂದು ಹೇಳಲಾದ ಅವರ ಇಲಾಖೆಯ ಮೋಹರ ಇರುವುದಿಲ್ಲ ಎಂದರೆ ಸರಿ. ಅದೇ ರೀತಿ ನಿಪಿಃ47ರ ಪುಟ ನಂಃ5 ಲೆಟ್ಟರ ಹೆಡ್ಡ ಮೇಲೆ ಇರುವುದಿಲ್ಲ ಎಂದರೆ ಸರಿ. ಪುಟ ಸಂಃ2ರ ಪತ್ರದ ಮೇಲೆ ಪಿಡಿಓ ಇವರ ಮೋಹರ ಇದ್ದು, ಸಹಿ ಇರುವುದಿಲ್ಲ ಎಂದರೆ ಸರಿ. ಪುಟ ನಂಃ3 ಕ್ಕೆ ಸಂಬಂದಪಟ್ಟ ಕಾಂಟ್ರಾಕ್ಟರ ಇವರ ಸಹಿ ಇರುವುದಿಲ್ಲ ಎಂದರೆ ಸರಿ. ಅದೇ ಪ್ರಕಾರ ಜಿಲ್ಲಾ ಪಂಚಾಯತ ಇಂಜಿನೀಯರ ಇವರ ಸಹಿ ಮತ್ತು ಸೀಲ್ ಇರುವುದಿಲ್ಲ ಎಂದರೆ ಸರಿ. ನಿಪಿಃ48 ರ ಮೇಲೆ ಇಂಜಿನೀಯರ ಇವರ ಸಹಿ ಮತ್ತು ಸೀಲ್ ಇರುವುದಿಲ್ಲ ಎಂದರೆ ಸರಿ. ಅದೇ ಪ್ರಕಾರ ಸದರಿ ದಾಖಲೆಗಳ ಮೇಲೆ ಪಿಡಿಓ, ಅಧ್ಯಕ್ಷರು ಅಥವಾ ಆಡಳಿತಾಧಿಕಾರಿಗಳ ಸಹಿ ಮತ್ತು ಮೋಹರ ಇರುವುದಿಲ್ಲ ಎಂದರೆ ಸರಿ.

7. ನಿಪಿಃ49 ರ ಮೇಲೆ ಇಂಜಿನೀಯರ ಇವರ ಸಹಿ ಮತ್ತು ಸೀಲ್ ಇರುವುದಿಲ್ಲ ಎಂದರೆ ಸರಿ. ಅದೇ ಪ್ರಕಾರ ಸದರಿ ದಾಖಲೆಗಳ ಮೇಲೆ ಪಿಡಿಓ ಇವರ ಸಹಿ ಮತ್ತು ಮೋಹರ ಇರುವುದಿಲ್ಲ ಎಂದರೆ ಸರಿ. ಪುಟ ನಂಃ7 ರಲ್ಲಿ ಅಧ್ಯಕ್ಷರ ಮೋಹರ ಇದ್ದು, ಅದಕ್ಕೆ ಸಹಿ ಇರುವುದಿಲ್ಲ ಎಂದರೆ ಸರಿ.

8. ನಿಪಿಃ50 ರ ಮೇಲೆ ಇಂಜಿನೀಯರ ಇವರ ಸಹಿ ಮತ್ತು ಸೀಲ್ ಇರುವುದಿಲ್ಲ ಎಂದರೆ ಸರಿ. ಅದೇ ಪ್ರಕಾರ ಸದರಿ ದಾಖಲೆಗಳ ಮೇಲೆ ಪಿಡಿಓ, ಅಧ್ಯಕ್ಷರು ಅಥವಾ ಆಡಳಿತಾಧಿಕಾರಿಗಳ ಸಹಿ ಇರುವುದಿಲ್ಲ ಎಂದರೆ ಸರಿ, ಆದರೆ ದಾಖಲೆಯ ಮೇಲೆ ಅಧ್ಯಕ್ಷರ ಮೋಹರ ಇದ್ದು, ಸಹಿ ಇರುವುದಿಲ್ಲ ಎಂದರೆ ಸರಿ. ನಿಪಿಃ51 ರ ಒಂದನೇ ಪುಟದ ಮೇಲೆ ಯಾವುದೇ ಮೋಹರ ಇರುವುದಿಲ್ಲ ಹಾಗೂ ಪುಟ ನಂಃ1 ರಿಂದ 10 ವರೆಗೆ ಪಿಡಿಓ ಇವರ ಸಹಿ ಇರುವುದಿಲ್ಲ ಎಂದರೆ ಸರಿ. ನಿಪಿಃ52 ರ ಒಂದನೇ ಪುಟದ ಮೇಲೆ ಯಾವುದೇ ಮೋಹರ ಇರುವುದಿಲ್ಲ ಹಾಗೂ ಪುಟ ನಂಃ1 ರಿಂದ 9 ವರೆಗೆ ಪಿಡಿಓ ಇವರ ಸಹಿ ಇರುವುದಿಲ್ಲ ಎಂದರೆ ಸರಿ.

9. ನಿಪಿಃ53 ರ ಒಂದನೇ ಪುಟದ ಮೇಲೆ ಯಾವುದೇ ಮೋಹರ ಇರುವುದಿಲ್ಲ ಹಾಗೂ ಪುಟ ನಂಃ1 ರಿಂದ 9 ವರೆಗೆ ಪಿಡಿಓ ಇವರ ಸಹಿ ಇರುವುದಿಲ್ಲ ಎಂದರೆ ಸರಿ. ನಿಪಿಃ55 ಕ್ಯಾಶ ರಿಜಿಸ್ಟರನಲ್ಲಿ ಯಾವುದೇ ಭಾಗದಲ್ಲಿ ಅಥವಾ ಯಾವುದೇ ಪುಟದಲ್ಲಿ ಅಧ್ಯಕ್ಷರು, ಪಿಡಿಓ ಅಥವಾ ಆಡಳಿತಾಧಿಕಾರಿಗಳ ಸಹಿ ಅಥವಾ ಮೋಹರ ಇರುವುದಿಲ್ಲ ಎಂದರೆ ಸರಿ. ನಿಪಿಃ54 ರ ಕ್ಯಾಶ ಬುಕ್ಕ ಟ್ರಾನ್ಸಕ್ಷನ ದಿಃ28.04.2010 ರಿಂದ ದಿಃ03.04.2010 ರ ವರೆಗಿನ ಪುಟಗಳನ್ನು ಸ್ಟಾಪ್ಲರನಿಂದ ನಮ್ಮ ಕಾರ್ಯಾಲಯದ ವಂತಿಯಿಂದ ಪಿನ್ ಮಾಡಲಾಗಿರುತ್ತದೆ. ಸದರಿ ಕ್ಯಾಶ ಬುಕ್ಕನ ಮುಂದುವರೆದ ಪುಟಗಳಲ್ಲಿ ದಿಃ07.09.2010 ವರೆಗೆ ಕಾರ್ಯದರ್ಶಿ ಇವರ ಸೀಲ್ ಇದ್ದು, ಸಹಿ ಇರುವುದಿಲ್ಲ ಎಂದರೆ ಸರಿ.

10. ನಿಪಿಃ55 ಪಾಸ್ ಬುಕ್ಕ ಪಂಚಾಯತ ವತಿಯಿಂದ ಮಾಡಿದ್ದು. ಸದರಿ ದಾಖಲೆ ಮೇಲೆ ಗ್ರಾಮ ಪಂಚಾಯತ ಇಂಗಳಗಿ ವತಿಯಿಂದ ಮಾಡಿರುವ ಬಗ್ಗೆ ಸಹಿ ಅಥವಾ ಮೋಹರ ಇರುವುದಿಲ್ಲ ಎಂದರೆ ಸರಿ. ನಿಪಿಃ56 ಚೆಕ್ಕ ಬುಕ್ಕಿನ ದಿಃ03.04.2010 ನಮೂದು ಮಾಡಿದ ಚೆಕ್ಕು ಇದ್ದು, ಅದು ನಗದೀಕರಣಕ್ಕೆ ಹಾಜರು ಮಾಡಿರುವುದಿಲ್ಲ ಎಂದರೆ ಸರಿ. ಸದರಿ ಚೆಕ್ಕ ಸ್ಲಿಪ ಮೇಲೆ ಯಾವುದೇ ಸಹಿ ಅಥವಾ ಮೋಹರ ಇರುವುದಿಲ್ಲ ಎಂದರೆ ಸರಿ. ನಿಪಿಃ56 ಚೆಕ್ಕ ಬುಕ್ಕನ್ನು ಪಿಡಿಓ ಇವರ

ಕಾಯ್ದಿರಿಸಿಕೊಳ್ಳುತ್ತಾರೆ. ನಿಪಿಃ56 ಚೆಕ್ಕ ಬುಕ್ಕ ಮೂಲಕ ಸ್ವಂತಕ್ಕೆ ಯಾವುದೇ ಹಣವನ್ನು ನಗದೀಕರಣ ಮಾಡುವ ಅವಕಾಶ ಇರುವುದಿಲ್ಲ. ನಿಪಿಃ56 ಚೆಕ್ಕನ ಬುಕ್ಕನ ದಿಃ03.04.2010 ರ ಚೆಕ್ಕ ಮೇಲೆ ಸ್ವಂತಕ್ಕೆ ಎಂದು ರೂಪಾಯಿ 36,681/- ಎಂದು ನಮೂದು ಮಾಡಲಾಗಿದೆ ಎಂದರೆ ಸರಿ. ಅದೇ ಪ್ರಕಾರ ನಂತರದ ಚೆಕ್ಕ ಸಹ ಸ್ವಂತಕ್ಕೆ ಎಂದು ನಮೂದು ಮಾಡಿ ರೂ 23,100/- ಎಂದು ನಮೂದು ಮಾಡಲಾಗಿರುತ್ತದೆ ಎಂದರೆ ಸರಿ.

11. ನಿಪಿಃ57 ರಲ್ಲಿ ಒಂದನೇ ಕೌಂಟರ ಫೈಲ ಹಣವನ್ನು ತಿದ್ದುಪಡಿ ಮಾಡಲಾಗಿದೆ ಎಂದರೆ ಸರಿ. ತಿದ್ದುಪಡಿಗೆ ಯಾರದ್ದು ಸಹ ರುಜು ಇರುವುದಿಲ್ಲ ಎಂದರೆ ಸರಿ. ಸದರಿ ಕೌಂಟರ ಫೈಲನ ಹಿಂದಿನ ಪುಟದ ಮೇಲೆ ತೋಟಗಾರಿಕೆ ಇಲಾಖೆ ತೆಂಗು ಬಾಳೆ ಸಸಿಗೆ ರೂ 96,000/- ಎಂದು ನಮೂದಿಸಲಾಗಿದೆ. ಅದರ ಕೆಳಗೆ ಮಂಜೂರಾತಿ ಮಾಡಿದವರ ಸಹಿ ಮತ್ತು ಸೀಲ್ ಇಲ್ಲ ಎಂದರೆ ಸರಿ.

12. ನಿಪಿಃ58 ರಲ್ಲೂ ಸಹ ಕೌಂಟರ ಫೈಲಗಳ ಹಿಂದೆ ಬರೆಯಲಾದ ಬರವಣಿಗೆಗೆ ಹಾಗೂ ಹಣಕ್ಕೂ ಯಾವುದೇ ಅಧಿಕಾರಿಗಳ ಸಹಿ ಮತ್ತು ಮೋಹರ ಇರುವುದಿಲ್ಲ ಎಂದರೆ ಸರಿ. ನಿಪಿಃ59 ರಲ್ಲೂ ಸಹ ಕೌಂಟರ ಫೈಲ ಒಂದು ಮತ್ತು ಎರಡುಗಳ ಹಿಂದೆ ಬರೆಯಲಾದ ಬರವಣಿಗೆಗೆ ಹಾಗೂ ಹಣಕ್ಕೂ ಯಾವುದೇ ಅಧಿಕಾರಿಗಳ ಸಹಿ ಮತ್ತು ಮೋಹರ ಇರುವುದಿಲ್ಲ ಎಂದರೆ ಸರಿ. ಮೂರನೆ ಕೌಂಟರ ಫೈಲಗೆ ಸಂಬಂದಪಟ್ಟ ಹಾಗೇ ಚೆಕ್ಕು ಮ್ಯಾನೇಜರ ಕೆವಿಜಿ ಬ್ಯಾಂಕರವರಿಗೆ ಕಳುಹಿಸಿದ್ದು. ಸದರಿ ಕೌಂಟರ ಫೈಲನ ಹಿಂದಿನ ಪುಟದಲ್ಲಿ ಹೆಬ್ಬೆಟ್ಟಿನ ಗುರುತು ಇದೆ. ಸದರಿ ಹೆಬ್ಬೆಟ್ಟನ್ನು ಫಕ್ಕೀರಪ್ಪ ಇವರು ಮಾಡಿದ್ದು, ಆದರೆ ಯಾಕೆ ಮಾಡಿದ್ದು ಅಂತ ನನಗೆ ಗೊತ್ತಿಲ್ಲ.

13. ನಿಪಿಃ60 ಪುಟ ನಂಃ9 ಕ್ಕೆ ಅಧ್ಯಕ್ಷರ ಸೀಲ್ ಇದ್ದು, ಸಹಿ ಇಲ್ಲ ಎಂದರೆ ಸರಿ. ನಿಪಿಃ61 ರಲ್ಲಿ ಪುಟ ನಂಃ1 ರಿಂದ 7 ರ ಗ್ರಾಮ ಪಂಚಾಯತ ಲೆಟ್ಟರ ಹೆಡ್ಡ ಮೇಲೆ ಇರುವುದಿಲ್ಲ ಎಂದರೆ ಸರಿ. ನಿಪಿಃ60 ಪುಟ ನಂಃ1 ರಿಂದ 3 ರ ಮೇಲೆ ಅಧ್ಯಕ್ಷರು, ಪಿಡಿಓ ಹಾಗೂ ಆಡಳಿತಾಧಿಕಾರಿಗಳ ಸೀಲ ಮತ್ತು ಸಹಿ ಇರುವುದಿಲ್ಲ ಎಂದರೆ ಸರಿ. ಅದೇ ಪ್ರಕಾರ ಪುಟ ನಂಃ4 ರಿಂದ 7 ರ ಮೇಲೆ ಪಿಡಿಓ ಸೀಲ ಅಥವಾ ಸಹಿ ಇರುವುದಿಲ್ಲ ಎಂದರೆ ಸರಿ. ನಿಪಿಃ62 ಠರಾವು ಪುಸ್ತಕ ಎಂದರೆ ಸರಿ. ಸದರಿ ಠರಾವು ಪುಸ್ತಕದ ಮೇಲ್ಪ್ರತಿಯೊಂದು ಪುಟದ ಮೇಲೆ ಸಾಮಾನ್ಯವಾಗಿ ಪಿಡಿಓ ಮತ್ತು ಅಧ್ಯಕ್ಷರು ಸಹಿ ಮಾಡಿ, ಮೋಹರ ಹಾಕುತ್ತಾರೆ ಎಂದರೆ ಸರಿ. ಆದರೆ ನಿಪಿಃ62 ರ ಸಭೆಯ ನಡುವಳಿಗಳ

ನಂತರ ಅಧ್ಯಕ್ಷರು ಸಹಿ ಮಾಡಿದ್ದು, ಆದರೆ ಸೀಲ್ ಹಾಕಿರುವುದಿಲ್ಲ. ಠರಾವು ಬುಕ್ಕನ ಉಳಿದ ಪುಟಗಳಲ್ಲಿ ಪಿಡಿಓ ಇವರ ಸಹಿ ಮತ್ತು ಮೋಹರ ಇರುವುದಿಲ್ಲ ಎಂದರೆ ಸರಿ. ಪುಟ ನಂಃ26 ರ ಮೇಲೆ ಕಾರ್ಯದರ್ಶಿ ಮತ್ತು ಅಧ್ಯಕ್ಷರು ಸಭೆ ಮುಕ್ತಾಯ ಆದ ಬಗ್ಗೆ ಸೀಲ್ ಇದೆ, ಸಹಿ ಇಲ್ಲ ಎಂದರೆ ಸರಿ. ಪುಟ ನಂಃ63, 70 ರ ರಲ್ಲಿ ಅಧ್ಯಕ್ಷರ ಸೀಲ್ ಇದ್ದು, ಸಹಿ ಇರುವುದಿಲ್ಲ ಎಂದರೆ ಸರಿ. ಪುಟ ನಂಃ76 ರಲ್ಲಿ ಅಧ್ಯಕ್ಷರು ಮತ್ತು ಪಿಡಿಓ ಇವರ ಸಹಿ ಮತ್ತು ಸೀಲ್ ಇರುವುದಿಲ್ಲ ಎಂದರೆ ಸರಿ. ಪುಟ ನಂಃ85 ರಲ್ಲಿ ವೈಟ್ನರ್ ಹಚ್ಚಿರುವ ಬಗ್ಗೆ ಕೌಂಟರ ಸಹಿ ಇರುವುದಿಲ್ಲ ಎಂದರೆ ಸರಿ. ಪುಟ ನಂಃ105, 108 ರಲ್ಲಿ ಅಧ್ಯಕ್ಷರ ಸಹಿ ಮತ್ತು ಸೀಲ್ ಇರುವುದಿಲ್ಲ ಎಂದರೆ ಸರಿ. ಪುಟ ನಂಃ127 ರಲ್ಲಿ ಅಧ್ಯಕ್ಷರ ಇವರ ಮೋಹರ ಇದ್ದು, ಸಹಿ ಇರುವುದಿಲ್ಲ ಎಂದರೆ ಸರಿ. ಸದರಿ ಪುಟದ ಮೇಲೆ ಪಿಡಿಓ ಇವರ ಸಹಿ ಮತ್ತು ಮೋಹರ ಇರುವುದಿಲ್ಲ ಎಂದರೆ ಸರಿ. ಪುಟ ನಂಃ132 ರಲ್ಲಿ ಸಭೆ ಮುಕ್ತಾಯಗೊಳಿಸಿದ ಬಗ್ಗೆ ಬರೆದಿರುವುದಿಲ್ಲ ಹಾಗೂ ಅಧ್ಯಕ್ಷರು ಮತ್ತು ಪಿಡಿಓ ಹಾಗೂ ಕಾರ್ಯದರ್ಶಿ ಇವರ ಸಹಿ ಮತ್ತು ಮೋಹರ ಇರುವುದಿಲ್ಲ ಎಂದರೆ ಸರಿ.

14. ನಿಪಿಃ63 ದಾಖಲೆಗಳು ನಮ್ಮ ಪಂಚಾಯತಗೆ ಸಂಬಂದಪಟ್ಟ ಹಾಗೇ ಆದ ದಾಖಲೆಗಳು ಆಗಿರುವುದಿಲ್ಲ. ನಿಪಿಃ63 ದಾಖಲೆಗಳ ವ್ಯವಹಾರದ ಬಗ್ಗೆ ನನಗೆ ಸಂಬಂಧ ಇರುವುದಿಲ್ಲ. ನಿಪಿಃ64 ರಲ್ಲಿ ಪುಟ ನಂಃ1 ಮತ್ತು 2 ರಲ್ಲಿ ಸದಸ್ಯರಯಾದಿಯನ್ನು ಪೊಲೀಸ ಇಲಾಖೆ ಇವರಿಗೆ ಕಳುಹಿಸಿಕೊಟ್ಟಿದ್ದು ಇರುತ್ತದೆ. ನಿಪಿಃ64 ರಲ್ಲಿ ಲೆಕ್ಕ ಪರಿಶೋಧನಾ ವರದಿ ಇದ್ದು, ಅದನ್ನು ಪೊಲೀಸರಿಗೆ ನೀಡಿರುತ್ತೇವೆ. ಆ ಬಗ್ಗೆ ಯಾವುದೇ ಪತ್ರ ಇರುವುದಿಲ್ಲ.

15. ನಿಪಿಃ65 ಪಂಚಾಯತಿಗೆ ಸಂಬಂದಪಟ್ಟಿದ್ದು ಅಲ್ಲ ಎಂದರೆ ಸರಿ. ಅದರಲ್ಲಿನ ವ್ಯವಹಾರ ನನಗೆ ಗೊತ್ತಿಲ್ಲ. ನಿಪಿಃ66 ರ ಮೇಲೆ ಗ್ರಾಮಪಂಚಾಯತ ಅಧ್ಯಕ್ಷರು, ಪಿಡಿಓ ಇವರ ಸಹಿ ಮತ್ತು ಮೋಹರ ಇರುವುದಿಲ್ಲ ಎಂದರೆ ಸರಿ. ನಿಪಿಃ67 ಗ್ರಾಮ ಪಂಚಾಯತ ಲೆಟ್ಟರ ಹೆಡ್ಡ ಮೇಲೆ ಇಲ್ಲ ಎಂದರೆ ಸರಿ. ನಿಪಿಃ68 ರ ಒಂದನೇ ಪುಟ ಜರಾಕ್ಸ ಪ್ರತಿ ಇದೆ ಎಂದರೆ ಸರಿ. ನಿಪಿಃ68 ರ ಮೇಲೆ ಯಾವುದೇ ಪುಟದ ಮೇಲೆ ಪಿಡಿಓ ಇವರ ಸಹಿ ಮತ್ತು ಮೋಹರ ಇರುವುದಿಲ್ಲ ಎಂದರೆ ಸರಿ. ನಿಪಿಃ69 ಸಿಬ್ಬಂದಿ ವೇತನ ಬಟವಟೆ ಪುಸ್ತಕಯಾಗಿದ್ದು, ಈ ಪ್ರಕರಣಕ್ಕೆ ಸಂಬಂಧ ಇರುವುದಿಲ್ಲ. ಸದರಿ ಪುಸ್ತಕದ ಯಾವುದೇ ಪುಟದ ಮೇಲೆ ಪಿಡಿಓ ಇವರ ಸಹಿ ಮತ್ತು ಮೋಹರ ಇರುವುದಿಲ್ಲ ಎಂದರೆ ಸರಿ.

16. ನಿಪಿಃ39 ರಿಂದ 69 ದಾಖಲೆಗಳು ಖೊಟ್ಟಿ ಸೃಷ್ಟಿ ಮಾಡಿದ ದಾಖಲೆಗಳು ಎಂದರೆ ಸರಿಯಲ್ಲ. ನಾನು ಪೊಲೀಸರ ಹೇಳಿಕೆ ಪ್ರಕಾರ ಸದರಿ ದಾಖಲೆಗಳನ್ನು ತಯಾರಿಸಿ ಒಪ್ಪಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಾನು ದೂರುದಾರರಿಗೆ ಸಹಾಯ ಮಾಡಲು ಈ ಪ್ರಕರಣದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿಃ39 ರಿಂದ 69 ರ ಮೇಲೆ ಅಧ್ಯಕ್ಷರು ಮತ್ತು ಕಾರ್ಯದರ್ಶಿ ಇವರ ಖೊಟ್ಟಿ ಸಹಿಗಳನ್ನು ಮತ್ತು ಮೋಹರ ಹಾಕಲಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿಃ40 ರಿಂದ 53 ರ ದಾಖಲೆಗಳಲ್ಲಿ 5 ನೇ ಆರೋಪಿ ಇಂಜಿನೀಯರ್ ಇವರ ಸಹಿ ಮತ್ತು ಮೋಹರ ಇರುವುದಿಲ್ಲ ಎಂದರೆ ಸರಿ. ನಿಪಿಃ39 ರಿಂದ 69 ರ ಮೇಲೆ ಆಡಳಿತಾಧಿಕಾರಿ 1 ನೇ ಆರೋಪಿ ಹಾಗೂ 4 ನೇ ಆರೋಪಿಯ ಸಹಿ ಮತ್ತು ಮೋಹರ ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಒಂದು ದಾಖಲೆಗೆ ಅವರ ಸಹಿ ಇದೆ ಎಂದು ನುಡಿಯುತ್ತಾರೆ. ಈ ರೀತಿ ಒಂದು ದಾಖಲೆಗೆ ಅವರ ಸಹಿ ಇದೆ ಅಂತ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಹಿ ಖೊಟ್ಟಿ ಸೃಷ್ಟಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಹಾಗೂ ಎಲ್ಲಾ ಆರೋಪಿಗಳಿಗೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

(ಈ ಹಂತದಲ್ಲಿ 2, 8 ಮತ್ತು 15 ನೇ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು 1, 3, 4 ರಿಂದ 6, 9 ರಿಂದ 14 ನೇ ಆರೋಪಿಗಳ ಪರ ವಕೀಲರು ಅಳವಡಿಸಿಕೊಂಡು ಮುಂದುವರೆಯುವುದಾಗಿ ತಿಳಿಸಿರುತ್ತಾರೆ.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

**Sd/-**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ ದಂ.ಗಳು**

**ಕುಂದಗೋಳ.**